# APPLICATION UNDER RIGHT TO INFORMATION ACT, 2005

Date: 24/08/2020
Place: Chitradurga

To,

Mr. V. Rajesh,
General Manager, CPIO & the Public Information Officer,
The Power Grid Corporation of India Ltd.,
Southern Region Transmission System – II RHQ,
Near RTO Driving Test Track, Singanayakanahalli,
Yalahanka Hobali, Bangalore – 560 064.

Dear Sir/Madam,

**Subject: Application for seeking information under Right to Information Act, 2005**

*************

I Mr. Madhu N R, Advocate wish to seek below stated information:

That Your Organization has drawn/is drawing 400 & 765 KV high tension lines in the district of Tumakuru. In respect of the same the Deputy Commissioner, Tumakuru has passed an order bearing No.MAG(1)CR:250/2014-15 dated 08.07.2014 whereby they have determined the compensation payable to the farmers upon whose lands you have drawn/drawing the said high tension line.

In respect of the same kindly **confirm whether your Company/Organisation is paying the compensation to the aggrieved farmers as determined by the Deputy Commissioner, Tumakuru vide their order dated 08.07.2014.**

Note: A copy of the Order dated 08.07.2014 passed by the Deputy Commissioner, Tumakuru is attached for your kind reference.

I hereby inform you that the following formalities have been completed by me:

A. That I have annexed the Postal Order bearing No. 48F 656807 for an amount of Rs.10/- in your favour dated 29.05.2019.
B. That I am the Citizen of India seeking information in the said capacity.

Request you to send all the information sought by me at the earliest.

Yours faithfully,

Madhu N.R.

1131

(Mr. Madhu. N. R)
Advocate
Address: Srigandha Nilaya, 1st Floor,
1st Cross, Sangameshwara Layout,
Behind Akashavani,
Kelagote, Chitradurga – 577 501
Mobile: 9513317555

ಮೆ|| ಪವರ್ ಗ್ರಿಡ್ ಕಾರ್ಪೋರೇಷನ್ ವತಿಯಿಂದ ಪವರ್‌ಲೈನ್ ನಿರ್ಮಾಣ ಮಾಡುವ ಸಂಬಂಧ ಜಿಲ್ಲಾಧಿಕಾರಿ ಮತ್ತು ಜಿಲ್ಲಾದಂಡಾಧಿಕಾರಿ, ತುಮಕೂರು ಜಿಲ್ಲೆ ಇವರ ಕಛೇರಿ ಆದೇಶ.

---

ಸಂ:ಎಂಎಜಿ(1)ಸಿಆರ್ 250/2014-15 ದಿನಾಂಕ 08.07.2014

1] ಮೆ|| ಪವರ್ ಗ್ರಿಡ್ ಕಾರ್ಪೋರೇಷನ್ ಇವರು ತುಮಕೂರು ಜಿಲ್ಲೆಯಲ್ಲಿ ಈ ಕೆಳಕಾಣಿಸಿದ ಪವರ್‌ಲೈನ್ ನಿರ್ಮಾಣ ಮಾಡಲು ಉದ್ದೇಶಿಸಿರುತ್ತಾರೆ.

i) 400 ಕೆವಿ D/C ಗೂಟಿ (ಆಂಧ್ರಪ್ರದೇಶ)-ಮಧುಗಿರಿ ಲೈನ್.

ii) 400 ಕೆವಿ D/C ಮಧುಗಿರಿ-ಯಲಹಂಕ ಲೈನ್.

iii) 765 ಕೆವಿ S/C ಮಧುಗಿರಿ-ಧರ್ಮಪುರಿ(ತಮಿಳುನಾಡು)ಲೈನ್.

ಆದೇಶ

1] ಈ ಮೇಲ್ಕಾಣಿಸಿದ ಪವರ್ ಲೈನ್ ಹಾದು ಹೋಗುವ ಜಮೀನಿನ ಮಾಲೀಕರು ಹೆಚ್ಚುವರಿ ಪರಿಹಾರ ನೀಡಲು ಒತ್ತಾಯಿಸಿ ಪವರ್‌ಲೈನ್ ನಿರ್ಮಾಣ ಮಾಡುವ ಕಾರ್ಯಕ್ಕೆ ತಡೆಯೊಡ್ಡುತ್ತಿದ್ದಾರೆಂದು ಮೆ|| ಪವರ್ ಗ್ರಿಡ್ ಕಾರ್ಪೋರೇಷನ್ ಅಧಿಕಾರಿಗಳು ವರದಿ ಮಾಡಿರುತ್ತಾರೆ.

2] ಜಮೀನುಗಳ ಮಾಲೀಕರು, ಕರ್ನಾಟಕ ರಾಜ್ಯ ರೈತ ಸಂಘಟನೆ ಪದಾಧಿಕಾರಿಗಳು ಮತ್ತು ಮೆ|| ಪವರ್ ಗ್ರಿಡ್ ಕಾರ್ಪೋರೇಷನ್‌ನ ಅಧಿಕಾರಿಗಳೊಂದಿಗೆ ವಿವಿಧ ದಿನಾಂಕಗಳಲ್ಲಿ ಪರಿಹಾರ ನಿಗಧಿಪಡಿಸುವ ಬಗ್ಗೆ ಅನೇಕ ಸಭೆಗಳನ್ನು ನಡೆಸಲಾಗಿರುತ್ತದೆ. ಅಂತಿಮವಾಗಿ ದಿನಾಂಕ 03.06.2014 ಮತ್ತು 26.06.2014ರಂದು ನಡೆದ ಸಭೆಯಲ್ಲಿ ಚರ್ಚಿಸಿ, ಜಮೀನುಗಳ ಮಾಲೀಕರುಗಳಿಗೆ ನೀಡಬಹುದಾದ ಪರಿಹಾರದ ಬಗ್ಗೆ ಅಂತಿಮವಾಗಿ ಇತ್ಯರ್ಥಪಡಿಸಲಾಯಿತು.

3] ಭೂಮಾಲೀಕರು ಪ್ರಸ್ತಾಪಿಸಿದ ವಿವಿಧ ವಿಷಯಗಳನ್ನು, ವಿದ್ಯುಚ್ಛಕ್ತಿ ಕಾಯ್ದೆ-2003, ಟೆಲಿಗ್ರಾಫ್ ಕಾಯ್ದೆ-1885 ಮತ್ತು ಪವರ್ ಲೈನ್ ಅಳವಡಿಕೆಯ ಅವಶ್ಯಕತೆಯನ್ನು ಪರಿಗಣಿಸಿ ಟೆಲಿಗ್ರಾಫ್ ಕಾಯ್ದೆ 1885ರ ಸೆಕ್ಷನ್-16ರಂತೆ ಈ ಕೆಳಕಾಣಿಸಿದಂತೆ ಆದೇಶ ಮಾಡಲಾಗಿದೆ.

(ಎ) ನಾಲ್ಕು ಹಂತಗಳ ಪವರ್‌ಲೈನ್ ಅಳವಡಿಕೆಗೆ/ಟವರ್ ನಿರ್ಮಾಣಕ್ಕಾಗಿ ಈ ಕೆಳಕಾಣಿಸಿದಂತೆ ಪರಿಹಾರ ಧನ ನೀಡಲು ತೀರ್ಮಾನಿಸಲಾಯಿತು.

| ಕ್ರ. ಸಂ. | ಸ್ಟ್ರಕ್ಚರ್ ಕ್ಯಾಟಗರಿ | ನಿಗದಿಪಡಿಸಲಾದ ಪರಿಹಾರದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | "ಎ" ಕ್ಯಾಟಗರಿ | ರೂ. 2.25ಲಕ್ಷಗಳು |
| 2 | "ಬಿ" ಕ್ಯಾಟಗರಿ | ರೂ. 2.50ಲಕ್ಷಗಳು |
| 3 | "ಸಿ" ಕ್ಯಾಟಗರಿ | ರೂ. 3.00ಲಕ್ಷಗಳು |
| 4 | "ಡಿ" ಕ್ಯಾಟಗರಿ | ರೂ. 4.00ಲಕ್ಷಗಳು |

"Xerox copy"

(ಬಿ) ಪವರ್‌ಲೈನ್ ನಿರ್ಮಾಣದ ಹಾದಿಯಲ್ಲಿ ಬರುವ ಎಲ್ಲ ಫಲವುಳ್ಳ ಮರಗಳನ್ನು ಫಲ ನೀಡುವ ಮರಗಳೆಂದು ಪರಿಗಣಿಸಿ, ಸರ್ಕಾರದ ಅಧಿಸೂಚನೆ ಮತ್ತು ಸುತ್ತೋಲೆಗಳನ್ನು ಆಧರಿಸಿ [illegible] ಲೆಕ್ಕಾಚಾರಿಸಿದಂತೆ ಪರಿಹಾರ ನೀಡಲು ತೀರ್ಮಾನಿಸಲಾಯಿತು.

1] ಪ್ರತಿಯೊಂದು ತೆಂಗಿನ ಮರಕ್ಕೆ -ರೂ. 16,314/-
2] ಪ್ರತಿಯೊಂದು ಅಡಿಕೆ ಮರಕ್ಕೆ -ರೂ. 3,728/-
3] ಪ್ರತಿಯೊಂದು ಮಾವಿನಮರಕ್ಕೆ -ರೂ. 27,862/-
4] ಪ್ರತಿಯೊಂದು ಹಲಸಿನಮರಕ್ಕೆ -ರೂ. 14,800/-
5] ಮತ್ತು ಇತರೆ ಮರಗಳಿಗೆ ಸರ್ಕಾರ ನಿಗದಿಪಡಿಸಿದ ದರದಂತೆ ಪರಿಹಾರ ನೀಡಲು ಜೊತೆಗೆ ಶೇಕಡಾ 10ರಷ್ಟು ಎಕ್ಸ್‌ಗ್ರೇಷಿಯಾ (Ex-gratia) ಪರಿಹಾರವನ್ನು ಪಾವತಿಸಲು ಫಲ ನೀಡದ ಮರಗಳಿಗೂ ಶೇ.10ರಷ್ಟು ಅನುದಾನ ಪೂರ್ವಕ ಪರಿಹಾರ ಪಾವತಿಸಲು ತೀರ್ಮಾನಿಸಲಾಯಿತು.

(ಸಿ) ಭೂಮಾಲೀಕರುಗಳಿಗೆ ಹಾನಿಗೊಳಗಾಗುವ ಮರಗಳು, ಬೆಳೆಗಳಿಗೆ ನೀಡುವ ಪರಿಹಾರದ ಜೊತೆಗೆ, ಪವರ್‌ಲೈನ್ ಎಳೆಯುವ ಸಮಯದಲ್ಲಿ ಜಮೀನಿಗೆ ಆಗುವ ಹಾನಿ ಬಗ್ಗೆ ಪ್ರತಿ ಎಕರೆ ಜಮೀನಿಗೆ ಅಧಿಕ ಪರಿಹಾರವಾಗಿ ರೂ.2.00 ಲಕ್ಷಗಳನ್ನು (ಎರಡು ಲಕ್ಷ ಮಾತ್ರ) ಪಾವತಿಸಲು ತೀರ್ಮಾನಿಸಲಾಯಿತು.

ಕೊಳವೆ ಬಾವಿಗೆ ಪರಿಹಾರ:

4] ಪವರ್‌ಲೈನ್ ನಿರ್ಮಾಣ ಮತ್ತು ಪವರ್‌ಲೈನ್ ಹಾದುಹೋಗುವ ಜಮೀನಿನಲ್ಲಿ ಬರುವ ಬೋರ್‌ವೆಲ್‌ಗಳಿಗೆ ಹಾನಿಯಾದಲ್ಲಿ, ಎಕ್ಸಿಕ್ಯೂಟೀವ್ ಇಂಜನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು/ಮಧುಗಿರಿ ಇವರ ಅಂದಾಜಿನಂತೆ ಸೂಕ್ತ ಪರಿಹಾರ ನೀಡಲು ಹಾಗೂ ಅವಶ್ಯಕವಾದಲ್ಲಿ ಬೇರೆ ಸ್ಥಳದಲ್ಲಿ ಬೋರ್‌ವೆಲ್ ಕೊರೆಸಿಕೊಡಲು ಮೆ|| ಪವರ್ ಗ್ರಿಡ್ ಕಾರ್ಪೋರೇಷನ್ ಅಧಿಕಾರಿಗಳಿಗೆ ಸೂಚಿಸಲಾಗಿದೆ.

5] ಜಂಟಿ ಅಳತೆ ಪ್ರಮಾಣ ಪತ್ರ (ಜೆಎಂಸಿ)

(ಎ) ಮೆ|| ಪವರ್ ಗ್ರಿಡ್ ಕಾರ್ಪೋರೇಷನ್ ಇವರಿಂದ ಅಳವಡಿಸಲಾಗುತ್ತಿರುವ ಪವರ್‌ಲೈನ್ ಹಾದುಹೋಗುವ ಜಮೀನಿನ ಜಂಟಿ ಮೋಜಣಿ ಮಾಡಿಸಲು ಜಿಲ್ಲಾಧಿಕಾರಿಯವರ ಕಛೇರಿಯಿಂದ ತಂಡವನ್ನು ರಚಿಸಲಾಗುವುದು. ಆದ್ದರಿಂದ ಜಂಟಿ ಮೋಜಣಿಗೆ ನೇಮಕಗೊಂಡ ತಂಡದವರು ಬಂದಾಗ ಜಮೀನು ಮಾಲೀಕರುಗಳು ಅವರ ಜಮೀನಿನ ಸ.ನಂ., ವಿಸ್ತೀರ್ಣ, ಮರಗಳು, ಇತ್ಯಾದಿ ವಿವರಗಳನ್ನು ನೀಡುವಂತೆ ರೈತರುಗಳಿಗೆ ತಿಳಿಸಲಾಯಿತು.

(ಬಿ) ಜಂಟಿ ಮೋಜಣಿ ಕಾರ್ಯ ನಡೆಸಿದ ನಂತರ ಪಂಚನಾಮೆ ಮಾಡತಕ್ಕದ್ದು, ಪಂಚನಾಮೆ, ಜೆಎಂಸಿ ಸರ್ಟಿಫಿಕೇಟ್, ಇಲಾಖೆಗಳಿಂದ ಮರವಳಿಗಳ ಬೆಲೆ ನಿಗದಿ ಪಡಿಸಿರುವ ದೃಢೀಕರಣ ಪತ್ರದ ಪ್ರತಿಗಳನ್ನು ಸಂಬಂಧಪಟ್ಟ ಜಮೀನಿನ ರೈತರಿಗೆ ನೀಡಿ ರೈತರಿಂದ ಈ ದಾಖಲೆಯನ್ನು ಪಡೆದಿರುವುದಕ್ಕೆ [illegible] ಪಡೆಯಲು ತೀರ್ಮಾನಿಸಲಾಯಿತು.

6] ಮೆ|| ಪವರ್ ಗ್ರಿಡ್ ಕಾರ್ಪೊರೇಷನ್ ಇವರು ಪವರ್ ಲೈನ್ ಅಳವಡಿಸುವ ಕಾರಿಡಾರ್ ಮಧ್ಯಭಾಗದಿಂದ ಎರಡೂ ಕಡೆ ನಿಗದಿತ ಅಳತೆಗೆ ಬೌಂಡರಿ ನಿಗದಿಪಡಿಸಿ ಗುರುತು ಮಾಡಲು ಸೂಚಿಸಲಾಯಿತು.

7] ಪವರ್ ಲೈನ್‌ಗಾಗಿ ನಿರ್ಮಾಣ ಮಾಡುವ ಸ್ಟ್ರಕ್ಚರ್ ಮತ್ತು ಪವರ್‌ಲೈನ್ ಹಾದುಹೋಗುವ ಜಮೀನಿನ ಮಾಲೀಕರೊಂದಿಗೆ ಜಮೀನಿನಲ್ಲಿಯೇ ಸಮಿತಿಯವರು ಛಾಯಾಚಿತ್ರಗಳನ್ನು ತೆಗೆಸಿಕೊಳ್ಳತಕ್ಕದ್ದು.

ರೈತರಿಗೆ ಈ ಕೆಳಕಾಣಿಸಿದ ಮೂರು ಹಂತಗಳಲ್ಲಿ ಪರಿಹಾರ ಧನವನ್ನು ವಿತರಿಸಲು ತೀರ್ಮಾನಿಸಲಾಯಿತು.

<u>ಹಂತ-I</u>

ಪ್ರಥಮ ಹಂತದಲ್ಲಿ ಪವರ್‌ಲೈನ್ ಟವರ್ ನಿರ್ಮಾಣ ಮಾಡುವ ಸ್ಥಳಕ್ಕೆ ಸಂಬಂಧಿಸಿದ ಜಮೀನಿಗೆ ಮುಂಗಡವಾಗಿ ಕಂಡಿಕೆ3(ಎ) ರಲ್ಲಿ ವಿವರಿಸಿರುವಂತೆ ಪರಿಹಾರ ನೀಡತಕ್ಕದ್ದು.

<u>ಹಂತ-II</u>

ಎರಡನೇ ಹಂತದಲ್ಲಿ ಮರಗಳು ಮತ್ತು ಬೆಳೆಗಳಿಗೆ ಪರಿಹಾರದ ಹಣ ಪಾವತಿಸತಕ್ಕದ್ದು.

<u>ಹಂತ-III</u>

ಮೂರನೇ ಹಂತದಲ್ಲಿ ಪವರ್‌ಲೈನ್ ಹಾದು ಹೋಗುವ ಜಮೀನಿನಲ್ಲಿನ ಬೆಳೆಗಳಿಗೆ ಮತ್ತು ಅಧಿಕ ಪರಿಹಾರ ಪಾವತಿಸಬೇಕಾದಲ್ಲಿ ಸದರಿ ಪರಿಹಾರ ಪಾವತಿಸತಕ್ಕದ್ದು.

ಎಲ್ಲರೂ ಸಹಕರಿಸುವಂತೆ ತೀರ್ಮಾನಿಸಲಾಯಿತು.

OFFICE OF THE DEPUTY COMMISSIONER & DISTRICT MAGISTRATE TUMKUR

8/7/14

ಜಿಲ್ಲಾಧಿಕಾರಿ,
ತುಮಕೂರು ಜಿಲ್ಲೆ.

ಜಿಲ್ಲಾಧಿಕಾರಿ
ತುಮಕೂರು ಜಿಲ್ಲೆ

ಪ್ರತಿಯನ್ನು:

1. ಡೆಪ್ಯೂಟಿ ಜನರಲ್ ಮ್ಯಾನೇಜರ್, ಮೆ|| ಪವರ್ ಗ್ರಿಡ್ ಕಾರ್ಪೊರೇಷನ್, ಬಟವಾಡಿ, ತುಮಕೂರು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ಜಿಲ್ಲಾ ಪೊಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ, ತುಮಕೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಉಪವಿಭಾಗಾಧಿಕಾರಿ, ತುಮಕೂರು/ಮಧುಗಿರಿ ಉಪವಿಭಾಗ, ತುಮಕೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
4. ತಹಶೀಲ್ದಾರ್, ತುಮಕೂರು/ಕೊರಟಗೆರೆ/ಮಧುಗಿರಿ ತಾಲ್ಲೂಕು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಕಛೇರಿ ಪ್ರತಿ.

"Xerox copy"